ಅಮ್ಮ ಕೋವಿಡ್–19ರ ಬಗ್ಗೆ ಹೇಳುತ್ತಿರೋದು ಅಂತ ಅವನಿಗೆ ತಿಳೀತು. ಶ್ವಾಸಕೋಶದ ಸಮಸ್ಯೆ ಇರುವವರಿಗೆ ತೊಂದರೆ ಜಾಸ್ತಿ ಅಂತ ಓದಿದ್ದ. ಅಪ್ಪನಿಗೆ ಇರುವ ಆಸ್ತಮಾ ಕಾರಣಕ್ಕೆ ರಿಸ್ಕ್ ಹೆಚ್ಚು ಎಂದೂ ಅರ್ಥಮಾಡಿಕೊಂಡಿದ್ದ. ನಡುವೆ ಒಮ್ಮೆ ಊರಿಗೆ ಹೋಗಬೇಕು ಅನ್ನಿಸಿದ್ದರೂ, ಸುಮ್ಮನೆ ಅವರಿಗೆ ರಿಸ್ಕ್ ಆಗಬಹುದು ಅನ್ನಿಸಿ ಹೋಗಿರಲಿಲ್ಲ. ಅದರಲ್ಲೂ ಕಳೆದ ಎರಡು ವಾರದಿಂದ ಮೈಸೂರು ನಗರದಲ್ಲೇ ಡ್ಯೂಟಿ. ಐವತ್ತು ಅರವತ್ತು ಮಂದಿಗೆ ಕೋವಿಡ್–19 ಇರೋದು ಬೇರೆ ಖಚಿತವಾಗಿತ್ತು. ಒಂದು ವೇಳೆ ನನಗೆ ಬಂದಿದ್ದರೆ ಇನ್ನೂ ರಿಸ್ಕ್ ಅನ್ನಿಸಿ ಸುಮ್ಮನಾಗಿದ್ದ. ಈ ವಿಚಾರವನ್ನು ಅಪ್ಪನಿಗೂ, ಅಮ್ಮನಿಗೂ ಕೊನೆ ಪಕ್ಷ ಚಿಕ್ಕಪ್ಪನಿಗಾದರೂ ಹೇಳೋಣ ಅನ್ನಿಸಿದರೂ, ಬೇಡ ಅನ್ನಿಸಿ ಸುಮ್ಮನಾಗಿದ್ದ. ಕೊನೆಗೆ ತಡೆಯಲಾಗದೆ ರೆಡ್ಡಿ ಸರ್ ಅವರಿಗೆ ಫೋನ್ ಮಾಡಿ ಮಾತನಾಡಿದ್ದ.



ಫೋನಿನಲ್ಲಿ ಬಹಳ ಹೊತ್ತು ಮಾತನಾಡಿದ್ದ ರೆಡ್ಡಿ ಅವರು, 'ಅವಕಾಶವಾದಾಗ ಕಮೂನ ಕಾದಂಬರಿ 'ದ ಪ್ಲೇಗ್' ಓದು' ಎಂದಿದ್ದರು. ಡಿಗ್ರಿ ಓದುತ್ತಿರುವಾಗ, ಆರನೇ ಸೆಮಿಸ್ಟರ್ ಭಾಗವಾಗಿ ಇದನ್ನು ಓದಿದ ನೆನಪು ಅವನಿಗೆ ಇತ್ತು. ತಕ್ಷಣವೇ ತನ್ನ ಪುಸ್ತಕದ ಬೀರುವಿನಲ್ಲಿ ಹುಡುಕಿ ಅದನ್ನು ಎತ್ತಿಟ್ಟುಕೊಂಡಿದ್ದ. ಬೈಕಿನ ಬ್ಯಾಗಿನಲ್ಲೆ ಅದು ಬಾಕಿಯಾಗಿತ್ತು. ಪುಸ್ತಕ ಹಿಡಿಯಲು ಅವನ ಕೈ ತಯಾರಿದ್ದರೂ, ಲಾಠಿ ಅವನ ಕೈಯನ್ನು ಬಿಡಲೇ ಇಲ್ಲ. ಲಾಠಿ ಹಿಡಿದು ಓಡಾಡುತ್ತಲೇ ಪ್ಲೇಗ್‌ನ ಕತೆಯನ್ನು ನೆನಪಿಸಿಕೊಳ್ಳಲು ಯತ್ನಿಸಿದ್ದ.

ಓರ್ವ ವೈದ್ಯ ಮಾತ್ರ ಇರುವ ಪಟ್ಟಣಕ್ಕೆ ಪ್ಲೇಗ್ ಹಬ್ಬುತ್ತದೆ. ಇಡೀ ನಗರವನ್ನು ಬಂದ್ ಮಾಡಿಬಿಡುತ್ತಾರೆ. ಸಾವಿರಾರು ಜನರಿರುವ ಆ ಊರಿಗೆ ಅವನೊಬ್ಬನೇ ವೈದ್ಯ. ಅವನು ಹಗಲು ರಾತ್ರಿ ಜನರಿಗೆ ಚಿಕಿತ್ಸೆ ನೀಡುತ್ತಾನೆ. ಜನ ಸಾಯುತ್ತಾರೆಂದು ತಿಳಿದಿದ್ದರೂ, ಚಿಕಿತ್ಸೆ ನೀಡುವುದನ್ನು ಮುಂದುವರಿಸುತ್ತಾನೆ. ಕೊನೆಗೆ ಒಂದು ದಿನ ಪ್ಲೇಗ್ ಇಲ್ಲವಾಗುತ್ತದೆ. ವೈದ್ಯ ಮತ್ತೆ ತನ್ನ ಎಂದಿನ ಜೀವನಕ್ಕೆ ಮರಳುತ್ತಾನೆ. ಜನರು ಕೂಡ ಎಂದಿನ ಚಟುವಟಿಕೆಗೆ ಮರಳುತ್ತಾರೆ. ನನ್ನ ಕರ್ತವ್ಯ ನಾನು ಮಾಡಿದೆ ಎಂದು ವೈದ್ಯ ತನಗೆ ತಾನು ಹೇಳಿಕೊಳ್ಳುತ್ತಾನೆ. ಇಷ್ಟು ಅವನಿಗೆ ನೆನಪಾಯಿತಾದರೂ, ಪುಸ್ತಕ ಓದಬೇಕೆಂದು ಅನ್ನಿಸುವುದು ಕಡಿಮೆಯಾಗಲಿಲ್ಲ. ಹಗಲು ರಾತ್ರಿ ಲಾಠಿ ಅವನ ಕೈಯಲ್ಲಿ ಉಳಿಯಿತೇ ವಿನಃ, ಕಮೂನ ಪ್ಲೇಗ್ ಪುಸ್ತಕ ಹಿಡಿಯಲು ಅವಕಾಶವೇ ಆಗಲಿಲ್ಲ.

ಫೋನಿನ ಸದ್ದಿಗೆ ಕಣ್ಣುಬಿಟ್ಟ ಮಾದೇಶ. ನೋಡಿದರೆ ಕೈ ಹಾಗೆ ಒಣಗಿದೆ. ತಟ್ಟೆ ಹಾಗೇ ಪಕ್ಕದಲ್ಲೇ ಬಿದ್ದಿದೆ. ವೈಬ್ರೇಟರ್ ಮೋಡಿನಲ್ಲಿದ್ದ ಫೋನು ತೊಡೆಯಿಂದ ಜಾರಿ ಕೆಳಗೆ ಬಿದ್ದ ಸದ್ದಿಗೆ ಅವನಿಗೆ ಎಚ್ಚರವಾಗಿದೆ. ತಿಂಡಿ ತಿನ್ನುತ್ತಾ ಹಾಗೇ ಕುಳಿತಲ್ಲೇ ನಿದ್ದೆ ಹೋಗಿರುವುದು ಅರಿವಾಯಿತು. ತಕ್ಷಣವೇ ಕೈ ಚಾಚಿ ಫೋನು ತೆಗೆದುಕೊಂಡು ನೋಡಿದ. ಮಿಸ್ ಕಾಲ್ ಲಿಸ್ಟ್‌ನಲ್ಲಿ ರಾಜಪ್ಪರ ಫೋನು. ಜೊತೆಗೆ ಡ್ರೈವರ್ ಅಝೀಂರ ಫೋನ್ ಕಾಲ್ ಕೂಡ ಇತ್ತು. ಫೋನನ್ನು ರಿಡೈಯಲ್ ಮಾಡಿ, ತಟ್ಟೆ ಎತ್ತಿಕೊಂಡು ಅಡುಗೆಕೋಣೆಗೆ ಹೊರಟ.

ಒಂದೇ ಕಾಲಿಗೆ ಫೋನ್ ರಿಸೀವ್ ಮಾಡಿದ ರಾಜಪ್ಪ, "ಯೂ ಪಕ್ಡ್ ಮಾದೇಸ. ವೇ ಆರ್ ಯೂ ಐಸೇ. ಯೂ ಆಸ್ ಓಳ್. ಬೇಗ ಬಾರೋ ಸೂಳೆ ಮಗನೆ" ಒಂದೇ ಉಸಿರಿಗೆ ಒದರಿದರು. "ಸರ್, ಬಂದೇ ಸರ್. ಮನೆಯಲ್ಲಿದ್ದೆ. ಈಗ ಬಂದೆ" ಎಂದು ಫೋನ್ ಕಟ್ ಮಾಡಿದ. ಸಮಯ ಮೂರಾಗಿತ್ತು.

ತಕ್ಷಣವೇ ಮುಖ ತೊಳೆದುಕೊಂಡು, ಹೊರಗೆ ಒಣಗಲು ಹಾಕಿದ್ದ ಯೂನಿಫಾರಂ ಒಳಗೆ ಹಾಕಿದ. ಇಸ್ತ್ರಿ ಮಾಡಿ ಇಟ್ಟಿದ್ದ ಯೂನಿಫಾರಂ ತೊಟ್ಟು, ಬೂಟ್ ಹಾಕಿ ಹೊರಟ. ದಾರಿಯಲ್ಲಿ ಅಝೀಂನಿಗೆ ಫೋನು ಮಾಡಿ ಲೊಕೇಶನ್ ತಿಳಿದುಕೊಂಡು ಅಲ್ಲಿಗೆ ತಲುಪಿದ. ರಾಜಪ್ಪ ನಂಜನಗೂಡು ರಸ್ತೆಗೆ